# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 24 ನೇ ಆಗಸ್ಟ್ ಮಾಹೆ 2022 ನೇ ಇಸವಿ.

**ಸಿ.ಸಿ. ನಂಃ 224/2021**

ಶ್ರೀ ಅನಂತ ಪದ್ಮನಾಭ ಕ್ರೆಡಿಟ್ ಕೋ ಅಪರೇಟಿವ್
ಸೊಸೈಟಿ ನಿಯಮಿತ, ಕಾರ್ಕಳ ಶಾಖೆ,
ಪ್ರತಿನಿಧಿಸುವವರುಃ ಕಾರ್ಯದರ್ಶಿ/ ಆಥೊರೈಸ್ಡ ಸಿಗ್ನೆಂಟರಿ,
ಶ್ರೀ ಹೆಚ್ ಶಿವರಾಮ ಸೋಮಯಾಜಿ, ಪ್ರಾಯಃ 44 ವರ್ಷ,
ತಂದೆಃ ರಾಘುರಾಮ ಸೋಮಯಾಜಿ,
ವಾಸಃ ಬಳ್ಳಿ ಮನೆ, ಹೆಬ್ರಿ ಗ್ರಾಮ ಮತ್ತು ಅಂಚೆ,
ಹೆಬ್ರಿ ತಾಲೂಕು, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ನೀರಜ್ ಭಟ್ಟ್,
ಪ್ರಾಯ 45 ವರ್ಷಗಳು,
ಗಂಡಃ ರಾಘವೇಂದ್ರ ಭಟ್ಟ್,
ವಾಸಃ # 8-3-50 ಸಿ, ಕಟ್ಟೆ ಆಚಾರ್ಯ ಮಾರ್ಗ,
ಕುಂಜಿಬೆಟ್ಟು, ಉಡುಪಿ ಜಿಲ್ಲೆ-576102. ... ಆರೋಪಿ

## ಆಪಾದನೆ

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಯ ಸಲುವಾಗಿ ದಿಃ 28-12-2020 ರಂದು ರೂ. 59,050/- ಗಳಿಗೆ ಕರ್ನಾಟಕ ಬ್ಯಾಂಕ್ ಲಿ., ಕುಂಜಿಬೆಟ್ಟು, ಉಡುಪಿ ಶಾಖೆ ಚೆಕ್ ಸಂಃ 813742 ನ್ನು ನೀಡಿದ್ದು, ಪಿರ್ಯಾದಿ ಸಂಸ್ಥೆಯವರು ಅದನ್ನು ನಗದೀಕರಿಸಲು ಫೆಡರಲ್ ಬ್ಯಾಂಕ್, ಉಡುಪಿ ಶಾಖೆಗೆ ಹಾಜರುಪಡಿಸಿದ್ದು, ಆದರೆ 'Funds insufficient ' ಎಂಬ ವಿಷಯವನ್ನು ಸದರಿ ಬ್ಯಾಂಕಿನವರು ದಿಃ 29-12-2020 ರ ಹಿಂಬರಹದ ಮೂಲಕ ತಿಳಿಯಪಡಿಸಿದ್ದು, ಅದರಂತೆ ಪಿರ್ಯಾದಿ ಸಂಸ್ಥೆಯವರು ದಿಃ 15-01-2021 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ

ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸು ನಿಮಗೆ ಜಾರಿಯಾಗಿದ್ದು, ಸದರಿ ನೋಟಿಸು ದಿಃ 16-01-2021 ರಂದು ನಿಮಗೆ ಜಾರಿಯಾಗಿದ್ದು, ಇದುವರೆಗೆ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.